# ಕಟ್ಟದ ಬಲೆಯ ಅಂಟಿನಂತು

ಕುರುಡು ಹಕ್ಕಿಗಳ ರಕ್ತದಿಂದ
ನನ್ನ ಕಣ್ಣುಗಳು ಕೆಂಪಡರಿವೆ
ಆತುರದಿ ಬೆರಳುಗಳು ಅರಸಿವೆ
ಗೊತ್ತುಗುರಿಯಿಲ್ಲದೇ ಒಂದು ರಾಗವ

ರಾತ್ರಿಯ ಕಣ್ಣಲ್ಲಿ ಕಣ್ಣಿಟ್ಟು ನಿಟ್ಟಿಸಿದೆ ದಿನ
ಮತ್ತು ರಾತ್ರಿಯೂ ಮರಳಿಸಿದೆ
ಆ ನೋಟವ
ಕನ್ನೆಹೆಣ್ಣ ರತಿನೋಟದಂತೆ
ಕಾಲವೇನೂ ದೇಹದ ಕುಲುಕಾಟವಲ್ಲ
ಸೆಳೆವ ಚುಂಬಕವ ಒಲಿದು
ಹಿಂಬಾಲಿಸುವುದಿಲ್ಲ

ಮುಂಗಾರಿನ ತುಂಟ ಮೋಡ ನಲಿದಿದೆ
ಅಪರಾಹ್ನದ ಆಗಸದಲ್ಲಿ ಒಪ್ಪತ್ತು ಹೊತ್ತು
ತಿರುಗಿ, ತಿರುವಿ ಗಿರ್ರೆಂದು ಜಾರಿ
ಹಗಲಿಂದ ಇರುಳಿಗೆ ಹೊತ್ತು
ಬೊಗಸೆಯಲ್ಲಿ ತಾರೆಗಳ ತೋಟ
ಗೋದೂಳಿ ನೋಟ

ಅಟ್ಟಿದಂತೆ ಥಟ್ಟನೆದ್ದು ಮನದ ಕಿಟಕಿಯ
ಕದವೊದ್ದು ಹಾರಿ ಹೋದ ಕವಿತೆಗಳೇ
ಸೂತಕದ ಮೌನ ಹೊದ್ದ ಗಾಳಿಗೆ
ಫಟಫಟನೆ ಬಡಿಯುತಿವೆ ನೋಡಿ
ಕಿಂಡಿ ಬಾಗಿಲು

ಆವರಿಸಿ ಕವಿದ ಕರಿ ಪಿಶಾಚಿಯೋ
ಎಂಬಂತೆ
ಕಂಡ ಪರಿತ್ಯಕ್ತ ನಾನು
ನಿಂದ್ಯ ನೆರಳುಗಳಲ್ಲಿ ನನಗೆ
ಅರ್ಥಹೀನ ಮುಕ್ತಿ...

ಆಗೊಮ್ಮೆ ಜಗದ ನಿರಾಕರಣ
ಉಳಿದಿದ್ದೆಲ್ಲವೂ ನಿರ್ಜೀವ, ನಿಸ್ಸತ್ವ,
ನಿಸ್ಸಾರ
ಸಿಂಬಿ ಸುತ್ತಿದ ಡಿಎನ್‌ಎ, ಅಸಂಖ್ಯ
ಜೀವಕೋಶ
ಜೀವರಕ್ಷಕ ಅಂಗ
ಅನಂತ ಬಯಕೆಗಳ ಹೊತ್ತ ಜೀವ
ಧಾತುವಿನನಂಗ ಚಲನೆ...

ಆಗಲೂ ಕಾಲವೆಂಬುದು ಈ ದೇಹ
ನುಲಿದಂತಲ್ಲ
ಮತ್ತು ಮುತ್ತಿನಂಥ ಮಾತುಗಳು
ಸತ್ತ ಕವಿತೆಗಳ ದೇಹದ
ಅವಶೇಷದಿಂದಾಯ್ದ
ನೆನಪುಗಳ ಒಂದೊಂದಾಗಿ ಕರೆದು ಕೂಗಿ
ಮತ್ತೊಮ್ಮೆ ಕೊಂದಂತೆ...

ಎಂಥೆಂಥಾ ತಿರುವುಗಳು, ಏನನಿರೀಕ್ಷಿತ
ಸುಳಿವು ಹೊಳಹುಗಳು
ಬೆಳಕಿನ ಕೊನೆಯ ಮಬ್ಬು ಬೆಳಕು
ಮರೆಯಾಗುವ ಕ್ಷಣವೊಂದು
ಹಿಡಿದೀತೆ ಬೊಗಸೆಯಲ್ಲಿ ಇಷ್ಟನ್ನೂ?

ನನಗಿದು ಗೊತ್ತು,
ಸತ್ತ ಮೋಹದ ಪುಷ್ಟ ತೊಡೆಗಳ
ಮೇಲಾಡುವ ಕೈಗಳು
ಸುಡುವ ನಿಗಿನಿಗಿ ಕೆಂಡ
ದ ಮೇಲೆ ಹೊರಳಿಸಿ, ಹಿಂಡಿ, ತಿರುಪಿ...

ಹಾರಿ ಹೋದ ಕವಿತೆಗಳೇ,
ಸರಿಯಾಗಿತ್ತು ಅದು
ನೀವು ಮಾಡಿದ್ದು.

ಮತ್ತು ನಾನು
ನಾನೆಂಬೋ ನಾನು
ಕವಿತೆಯಾಗುವ ಪರಿ.